**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ/23/ಐಎನ್ಎಸ್(3)/2016/5068

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001
ದಿನಾಂಕ: 23.03.2017

**ಜ್ಞಾಪನ**

ವಿಷಯ: ಸರ್ಕಾರಿ, ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಬಯೋಮೆಟ್ರಿಕ್ ಯಂತ್ರಗಳಲ್ಲಿ ಹಾಜರಾತಿ ನಿರ್ವಹಣೆ ಬಗ್ಗೆ.

ಉಲ್ಲೇಖ: ಇದೇ ಸಮಸಂಖ್ಯೆ.ಪತ್ರ ದಿನಾಂಕ: 23.01.2017

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ, ಉಲ್ಲೇಖಿತ ಸರ್ಕಾರಿ ಆದೇಶದ ಅನುಗುಣವಾಗಿ ಪ್ರಾಂಶುಪಾಲರನ್ನೊಳಗೊಂಡಂತೆ ಎಲ್ಲಾ ಉಪನ್ಯಾಸಕರು, ಕಾರ್ಯಗಾರ ಸಿಬ್ಬಂದಿ ಹಾಗೂ ಕಛೇರಿ ಸಿಬ್ಬಂದಿಯವರು ಬಯೋಮೆಟ್ರಿಕ್ ಯಂತ್ರದಲ್ಲಿ ಹಾಜರಾತಿಯನ್ನು ನಮೂದಿಸುವುದು ಕಡ್ಡಾಯವಾಗಿರುತ್ತದೆ.

ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ, ಪ್ರಾಂಶುಪಾಲರನ್ನೊಳಗೊಂಡಂತೆ ಎಲ್ಲಾ ಉಪನ್ಯಾಸಕರು, ಕಾರ್ಯಗಾರ ಸಿಬ್ಬಂದಿ ಹಾಗೂ ಕಛೇರಿ ಸಿಬ್ಬಂದಿಯವರು ಬಯೋಮೆಟ್ರಿಕ್ ಯಂತ್ರದಲ್ಲಿ ಹಾಜರಾತಿಯನ್ನು ನಮೂದಿಸಿರುವ ಬಗ್ಗೆ ಕ್ರೋಢೀಕೃತ ಮಾಹಿತಿಯನ್ನು ಜಂಟಿ ನಿರ್ದೇಶಕರು (ತನಿಖೆ) ಇವರಿಗೆ ಕಳುಹಿಸುವಂತೆ ಉಲ್ಲೇಖಿತ ಪತ್ರದಲ್ಲಿ ಈಗಾಗಲೇ ತಿಳಿಸಲಾಗಿದ್ದರೂ ಸಹ ಕೆಲವು ಸಂಸ್ಥೆಗಳು ಬಯೋಮೆಟ್ರಿಕ್ ಹಾಜರಾತಿಯ ಬಗ್ಗೆ ಕ್ರೋಢೀಕೃತ ಮಾಹಿತಿಯನ್ನು ನೀಡದೇ ಇರುವುದು ಕಂಡುಬಂದಿರುತ್ತದೆ. ಆದುದರಿಂದ ಎಲ್ಲಾ ಸಂಸ್ಥೆಯ ಪ್ರಾಂಶುಪಾಲರುಗಳು ಬಯೋಮೆಟ್ರಿಕ್ ಹಾಜರಾತಿಗೆ ಸಂಬಂಧಿಸಿದಂತೆ, ತಿಂಗಳವಾರು ಕ್ರೋಢೀಕರಿಸಿದ ಸಂಪೂರ್ಣ ಮಾಹಿತಿಯ ಸಾಫ್ಟ್ ಕಾಪಿಯನ್ನು ಮತ್ತು ಈ ಕೆಳಕಂಡ ಮಾಹಿತಿಯನ್ನು ಕೂಡಲೇ ಜಂಟಿ ನಿರ್ದೇಶಕರು (ತನಿಖೆ) ಇವರ ಇ-ಮೇಲ್ ವಿಳಾಸ jdins.2014@gmail.com ಕ್ಕೆ ಕಳುಹಿಸಲು ಆದೇಶಿಸಲಾಗಿದೆ.

1. ಪ್ರಾಂಶುಪಾಲರು/ಉಪನ್ಯಾಸಕರು/ಕಾರ್ಯಗಾರ ಸಿಬ್ಬಂದಿಯವರು/ಕಛೇರಿ ಸಿಬ್ಬಂದಿಯವರು ಬಯೋಮೆಟ್ರಿಕ್ ಯಂತ್ರದಲ್ಲಿ ಹಾಜರಾತಿಯನ್ನು ದಾಖಲಿಸಲು ನಿಗದಿಪಡಿಸಿರುವ ಸಮಯ (Biometric Attendance Timings) ದ ಬಗ್ಗೆ ತೆಗೆದುಕೊಂಡ ನಿರ್ಣಯದ ಪ್ರತಿ.
2. ಸಂಸ್ಥೆಯ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆಯಲ್ಲಿ ನೋಂದಣಿಯಾಗಿರುವ ಎಲ್ಲಾ ಸಿಬ್ಬಂದಿಯವರ ಹೆಸರು ಮತ್ತು ಪದನಾಮವನ್ನೊಳಗೊಂಡ ಪಟ್ಟಿ.
3. **ಸಂಸ್ಥೆಯ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆಯಲ್ಲಿ ನೋಂದಣಿಯಾಗದೇ ಇರುವ ಎಲ್ಲಾ ಸಿಬ್ಬಂದಿಯವರ** ಹೆಸರು, ಪದನಾಮ ಮತ್ತು ಕಾರಣ

ಮುಂದುವರೆದು, ಬಯೋಮೆಟ್ರಿಕ್ ಹಾಜರಾತಿಗೆ ಸಂಬಂಧಿಸಿದಂತೆ, ತಿಂಗಳವಾರು ಕ್ರೋಢೀಕರಿಸಿದ ಸಂಪೂರ್ಣ ಮಾಹಿತಿಯ ಸಾಫ್ಟ್ ಕಾಪಿಯನ್ನು ಪ್ರತಿ ತಿಂಗಳು 10ನೇ ತಾರೀಖಿನೊಳಗೆ ಜಂಟಿ ನಿರ್ದೇಶಕರು (ತನಿಖೆ) ಇವರ ಇ-ಮೇಲ್ ವಿಳಾಸ jdins.2014@gmail.com ಕ್ಕೆ ತಪ್ಪದೇ ಕಳುಹಿಸಲು ಆದೇಶಿಸಲಾಗಿದೆ.

ಪರಿವೀಕ್ಷಣೆಯ ಸಮಯದಲ್ಲಿ ಸದರಿ ಮಾಹಿತಿಯನ್ನು ಪರಿವೀಕ್ಷಿಸಲಾಗುವುದು.

**ನಿರ್ದೇಶಕರು**

**ಪ್ರತಿ:**

1. ನಿರ್ದೇಶಕರ ಆಪ್ತ ಶಾಖೆಗೆ.
2. ಜಂಟಿ ನಿರ್ದೇಶಕರು (ಆಡಳಿತ/ತನಿಖೆ/ಪರೀಕ್ಷೆ/ಡಿವಿಪಿ/ಸಿಡಿಸಿ)
3. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಇ-ಗೌವರ್ನೆನ್ಸ್ ವಿಭಾಗಕ್ಕೆ (ಅಂತರ್ಜಾಲದಲ್ಲಿ ಪ್ರಕಟಿಸಲು)
5. ಕಡತಕ್ಕೆ.